ದಿಃ 11-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು : ವಾದಿ ಪರ ಶ್ರೀ. CSH ವಕೀಲರಿಂದ:

ದಾವಾ ಆಸ್ತಿಯನ್ನು ನನ್ನ ಮಗಳು ದಾವೆಯಲಿ ಸೇರಿಸಿರುತ್ತಾಳೋ ಇಲ್ಲ ನನಗೆ ಗೊತ್ತಿಲ್ಲ. ಆಸ್ತಿ ಸಂಃ 8-43 ಪಿತ್ರಾರ್ಜಿತ ಆಸ್ತಿ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿ ನನಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಂಗಪ್ಪನಿಗೆ ಹಣಮಂತ ಮತ್ತು ನಾಗೂಬಾಯಿ ಇಬ್ಬರೇ ಮಕ್ಕಳು ಇರುತ್ತಾರೆ ಎಂದರೆ ಸರಿಯಲ್ಲ. ನಿಂಗಪ್ಪನಿಗೆ ಮಕ್ಕಳು ಇಲ್ಲದ ಕಾರಣ ಗಜಾನನ ರವರನ್ನು ಹಾಗೇ ಮನೆಯಲ್ಲಿ ತಂದು ಇಟ್ಟುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆನಂತರ ಹಣಮಂತ ಮತ್ತು ನಾಗೂಬಾಯಿ ಇಬ್ಬರು ಮಕ್ಕಳು ಹುಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಂಗಪ್ಪನಿಗೆ ದಾವಾ ಆಸ್ತಿ ಬಿಟ್ಟು ಬೇರೆ ಆಸ್ತಿ ಇರುವುದಿಲ್ಲ. ನಿಂಗಪ್ಪ ತೀರಿಕೊಂಡ ನಂತರ ವಾದಿ ದಾವಾ ಆಸ್ತಿಯನ್ನು ತನ್ನ ಹೆಸರಿಗೆ ಮಾಡಿಕೊಂಡಿರುತ್ತಾನೆ ಎಂದರೆ ಸರಿಯಲ್ಲ.

ನಿಂಗಪ್ಪನ ಜೀವಿತ ಕಾಲದಲ್ಲಿ ನನ್ನ ಗಂಡ ಪಾಲುಕೇಳಿರುತ್ತಾನೆ ಎಂದರೆ ಸರಿ. ಅವರು ಪಾಲು ಕೊಡದಿದ್ದಕ್ಕೆ ದಾವೆ ಹೂಡಿಲ್ಲ ಎಂದರೆ ಸರಿ. ನನ್ನ ಗಂಡ ತೀರಿಕೊಂಡ ನಂತರ ನಾನು ಪಾಲು ದಾವೆ ಹೂಡಿಲ್ಲ ಎಂದರೆ ಸರಿ. ನನ್ನ ಗಂಡ ತೀರಿಕೊಂಡ ನಂತರ ನನ್ನ ಗಂಡ ಪಾಲು ಕೊಟ್ಟಿಲ್ಲ ಎಂದು ನಾನು ಸಹ ಪಾಲುವಾಟ್ನಿ ದಾವೆ ಹೂಡಿಲ್ಲ ಎಂದರೆ ಸರಿ. ನನಗೆ ದಾವಾ ಆಸ್ತಿ ಚೆಕ್ಕುಬಂದಿ ಹೇಳಲು ತಿಳಿಯುವುದಿಲ್ಲ. ವಾದಿಯೂ ಮಹಾರಾಷ್ಟ್ರಕ್ಕೆ ದುಡಿಯಲು ಹೋದಾಗ ಆತನ ಅನುಮತಿ ಇಲ್ಲದೇ ದಾವಾ ಆಸ್ತಿಯಲ್ಲಿ ನಾವು ಶಾವಿಗಿ ಮಾಡುವ ಇಟ್ಟುಕೊಂಡು ಕಬ್ಜೆ ಪಡೆದಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ